# ಎರಡನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ, ಚಿಕ್ಕಬಳ್ಳಾಪುರ, ಕಾರ್ಯಸ್ಥಾನ ಚಿಂತಾಮಣಿ.

# ಎಸ್.ಸಿ. ನಂಃ 29/2023

| | | | |
|---|---|---|---|
| **ಸಾಕ್ಷಿದಾರರ ಹೆಸರುಃ** | ಹಿಮಾಮ್ ಸಾಬ್ | ಪ್ರಾಸಾಃ | 02 |
| **ತಂದೆಯ ಹೆಸರುಃ** | ನನ್ನೆ ಸಾಬ್ | ಚಾಸಾಃ | 02 |
| **ವಯಸ್ಸುಃ** | 55 | ಪ್ರಮಾಣ ವಚನ ಭೋದಿಸಿದ ದಿನಾಂಕ: | 12-08-2025 |
| **ಉದ್ಯೋಗಃ** | ಖಾಸಗಿ | | |
| **ವಾಸ ಸ್ಥಳಃ** | ಚಿಂತಾಮಣಿ | | |

## ಮುಖ್ಯ ವಿಚಾರಣೆಃ ಸರ್ಕಾರಿ ಅಭಿಯೋಜಕರಿಂದಃ

ಚಾಸಾ-*1* ನನ್ನ ಮಗಳು. ನನಗೆ ಆರೋಪಿ ಗೊತ್ತಿಲ್ಲ. ಕೌನ್ಸಿಲರ್ ಸಾಧೀಕ್ ಎಂಬಾತ ಈ ಕೇಸು ಕೊಡಿಸಿದ್ದಾನೆ. ಆರೋಪಿ ನನ್ನ ಮಗಳನ್ನು ಕರೆದುಕೊಂಡು ಹೋಗಿ ಗಲಾಟೆ ಮಾಡಿದ್ದ ಎಂದು ಈ ಕೇಸು ಕೊಡಿಸಿದ್ದೇವೆ. ನನ್ನ ಮಗಳನ್ನು ತಿರುಪತಿ , ಬೆಂಗಳೂರಿಗೆ ಕರೆದುಕೊಂಡು ಹೋಗಿದ್ದ. *20* ದಿನಗಳ ನಂತರ ಮಗಳು ಹಿಂದಿರುಗಿ ಬಂದಿದ್ದಳು. ನನ್ನ ಮಗಳು ನನ್ನ ಬಳಿ ಏನು ಹೇಳಲಿಲ್ಲ.

**(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ, ಪಾಟೀ ಸವಾಲು ಮಾಡಲು ಅಭಿಯೋಜಕರು ಅನುಮತಿ ಕೇಳಿದ್ದಾರೆ. ಅನುಮತಿ ನೀಡಲಾಗಿದೆ)**

## ಪಾಟೀ ಸವಾಲುಃ ಸರ್ಕಾರಿ ಅಭಿಯೋಜಕರಿಂದಃ

ದಿ.07.11.2022 ರಂದು ನನ್ನ ಮಗಳು ಕಾಣೆಯಾಗಿದ್ದು ಈ ಬಗ್ಗೆ ಪೋಲಿಸರಲ್ಲಿ ದೂರು ನೀಡಿದ್ದು ನಂತರ ಆಕೆ ಹಿಂದಿರುಗಿ ಬಂದಾಗ ವಿಚಾರಿಸಲಾಗಿ ಆರೋಪಿ ಆಕೆಯನ್ನು

ಕುಸಲಾಯಿಸಿ ಮದುವೆ ಮಾಡಿಕೊಳ್ಳುತ್ತೇನೆಂದು ಭರವಸೆ ನೀಡಿ ಆಕೆಯ ಮೇಲೆ ಅತ್ಯಾಚಾರ ಮಾಡಿದ್ದ ವಿಚಾರ ನನ್ನ ಬಳಿ ಹೇಳಿಕೊಂಡಿದ್ದು ಈಗ ಬಗ್ಗೆ ನಾನು ------------ಬೆದರಿಕೆ ಹಾಕಿರುತ್ತೇನೆ  ನಿಪಿ.5 ರಂತೆ ಪೋಲಿಸರ ಮುಂದೆ ಹೇಳಿಕೆ ಕೊಟ್ಟಿದ್ದರೂ ಸಹ ಈಗ ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ನೀಡುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ ಆರೋಪಿ ಪರ ಶ್ರೀ. ವಕೀಲರಿಂದ ಪಾಟೀ ಸವಾಲು**

**ಮರು ವಿಚಾರಣೆಃ ….. ಇಲ್ಲ …..**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚು ಮಾಡಲಾಯಿತು)                    ಓ.ಹೇ.ಕೇ. ಸರಿ ಇದೆ.

ಸಹಿ/-

ದಿಃ12.08.2025
ಸ್ಥಳಃ ಚಿಂತಾಮಣಿ

**(ಕೆ.ಎಂ.ರಾಜಶೇಖರ)**
ಎರಡನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿಕ್ಕಬಳ್ಳಾಪುರ, ಕಾರ್ಯಸ್ಥಾನ ಚಿಂತಾಮಣಿ.